ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1398

ಸದಸ್ಯರ ಹೆಸರು : ಡಾ: ತೇಜಸ್ವಿನಿ ಗೌಡ,(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸುವ ದಿನಾಂಕ : 24-12-2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಯಾವ ಯಾವ ಜಿಲ್ಲೆಗಳಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ; ಯಾವ ಯಾವ ರೀತಿಯ ಬೆಳೆ ಉತ್ಪನ್ನಗಳ ಪ್ರಮಾಣ ಎಷ್ಟು;	ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಜಿಲ್ಲೆಗಳಾದ ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಬೆಳೆಗಳು ಈ ಕೆಳಕಂಡಂತಿವೆ. 1. ಹಣ್ಣುಗಳು 2. ತರಕಾರಿಗಳು 3. ಸಾಂಬಾರು ಬೆಳೆಗಳು 4. ತೋಟದ ಬೆಳೆಗಳು 5. ವಾಣಿಜ್ಯ ಪುಷ್ಪಗಳು 6. ಸುಗಂಧಿತ ಬೆಳೆಗಳು 7. ಔಷಧೀಯ ಬೆಳೆಗಳು ಮಲೆನಾಡಿನ ಜಿಲ್ಲೆಗಳ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಹಾಗೂ ಉತ್ಪನ್ನದ ಪ್ರಮಾಣವನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.
ಆ)	ಮಲೆನಾಡಿನ ಪ್ರದೇಶದಲ್ಲಿ ಎಷ್ಟು ಸಂಖ್ಯೆಯ ಹಸಿರು ಮನೆ (Green House) ಯೋಜನೆ ಜಾರಿಯಾಗಿದೆ; ಯಾವ ಯಾವ ರೀತಿ ರಿಯಾಯಿತಿ-ವಿನಾಯಿತಿ (ಸಬ್ಸಿಡಿ) ಕುರಿತು ಪೂರ್ಣ ಮಾಹಿತಿ ನೀಡುವುದು?	ಮಲೆನಾಡಿನ ಪ್ರದೇಶದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 2021-22 ನೇ ಸಾಲಿನಲ್ಲಿ ಹಸಿರು ಮನೆ (Green House) ಘಟಕಕ್ಕೆ ನಿಗಧಿಯಾಗಿರುವ ಗುರಿಗಳು ಈ ಕೆಳಕಂಡಂತಿರುತ್ತವೆ.

(ಭೌತಿಕ ಹೆ/ಆರ್ಥಿಕ ರೂ ಲಕ್ಷಗಳಲ್ಲಿ)

ಕ್ರ.ಸಂ	ಜಿಲ್ಲೆಗಳು	ಭೌತಿಕ	ಆರ್ಥಿಕ
1	ಉತ್ತರ ಕನ್ನಡ	1.2	50.4
2	ಶಿವಮೊಗ್ಗ	0	0
3	ಉಡುಪಿ	0	0
4	ಚಿಕ್ಕಮಗಳೂರು	1.4	58.8
5	ದಕ್ಷಿಣ ಕನ್ನಡ	0.2	8.4
6	ಹಾಸನ	1.4	58.8
7	ಕೊಡಗು	0.4	16.80
ಒಟ್ಟು		**4.6**	**193.2**

ಪ್ರಸಕ್ತ ಸಾಲಿನಲ್ಲಿ ಪ್ರತಿ ಫಲಾನುಭವಿಗೆ ಘಟಕ ವೆಚ್ಚ ರೂ.789.00 ರಿಂದ ರೂ.817/ ಚದರ ಮೀಟರ್ ರಂತೆ ಸಾಮಾನ್ಯ ವರ್ಗದ ರೈತರಿಗೆ ಶೇ. 50 ರಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಂತೆ ಸಹಾಯಧನ ನೀಡಲು ಹಾಗೂ ಪ್ರತಿ ಫಲಾನುಭವಿಗೆ ಗರಿಷ್ಠ 4000 ಚ.ಮೀ ಹಸಿರುಮನೆ ನಿರ್ಮಿಸಿಕೊಳ್ಳಲು ಅವಕಾಶವಿರುತ್ತದೆ.

(ಇ)	ಮಹಿಳಾ ಕೃಷಿಕರಿಗೆ ವಿಶೇಷವಾದ ಸಬ್ಸಿಡಿ ಯೋಜನೆ ಇದೆಯೇ; ಎಷ್ಟು ಮಂದಿ ಬಳಸಿಕೊಂಡಿದ್ದಾರೆ; ಇದರಿಂದ ಮಹಿಳಾ ಕೃಷಿಕರ ಆರ್ಥಿಕ ಸ್ವಾವಲಂಬನೆ ಆಗಿದೆಯೇ:	ಮಹಿಳಾ ಕೃಷಿಕರಿಗೆ ವಿಶೇಷವಾದ ಸಬ್ಸಿಡಿ ಯೋಜನೆ ಇರುವುದಿಲ್ಲ. ಪ್ರಸ್ತುತ ಇರುವ ಇಲಾಖಾ ಯೋಜನೆಗಳಲ್ಲಿ ಶೇ.33ರಷ್ಟು ಅನುದಾನವನ್ನು ಮಹಿಳಾ ಫಲಾನುಭವಿಗಳಿಗೆ ಮೀಸಲಿಡಲಾಗುತ್ತಿದೆ. ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಜಿಲ್ಲೆಗಳಲ್ಲಿ 2021-22ನೇ ಸಾಲಿನಲ್ಲಿ **2799** ಸಂಖ್ಯೆಯ ಮಹಿಳಾ ಫಲಾನುಭವಿಗಳು ಇಲಾಖಾ ಯೋಜನೆಗಳನ್ನು ಬಳಸಿಕೊಳ್ಳಲಾಗಿದೆ, ಮಹಿಳಾ ಕೃಷಿಕರ ಸ್ವಾವಲಂಬನೆ ಆಗಿರುತ್ತದೆ.